ಇಂದು ದಿನಾಂಕಃ 04.07.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿಯ ಪರ ವಕೀಲರಿಂದಃ

1. ನಿಪಿ-3 ರ ಖರೀದಿ ಪತ್ರದಲ್ಲಿ ಇರುವ ಫೋಟೋವು ನಿಮ್ಮದ ಎಂದು ತೋರಿಸಿದಾಗ ಸಾಕ್ಷಿಯು ನನಗೆ ಕಣ್ಣುಗಳು ಸರಿಯಾಗಿ ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ನಾನು ಯಾರಿಗೂ ಖರೀದಿ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ನಾನು ಚನ್ನಬಸಪ್ಪ ವೀರಪ್ಪ ಗಿರಿಯಾಳ ಇವರಿಗೆ ನಿಪಿ-3 ರ ಖರೀದಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದರಿ ನಿಪಿ-3 ರ ದಾಖಲೆಯನ್ನು ಉಪ ನೋಂದಣಾಧಿಕಾರಿಯವರ ಕಚೇರಿಯಲ್ಲಿ ಅವರು ಮುಂದೆ ಹೆಬ್ಬೆಟ್ಟಿನ ಗುರುತನ್ನು ಹಾಕಿ ಮಾರಾಟ ಮಾಡಲು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅದನ್ನು ಲಾವಣಿಗೆ ಎಂದು ತಿಳಿದು ಗುರುತನ್ನು ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಚನ್ನಬಸಪ್ಪ ವೀರಪ್ಪ ಗಿರಿಯಾಳ ಇವರಿಗೆ ಸುಮಾರು 5 ರಿಂದ 6 ವರ್ಷಗಳ ಹಿಂದೆ ಲಾವಣಿಗೆ ನೀಡಿರುತ್ತೇನೆ. ನಾನು ಈ ಹಿಂದೆ ಲಾವಣಿ ಪತ್ರವನ್ನು ಮಾಡಿಕೊಟ್ಟಾಗ ಉಪನೋಂದಣಾಧಿಕಾರಿಯವರ ಮುಂದೆ ನೋಂದಾಯಿಸಿಕೊಟ್ಟಿರುವುದಿಲ್ಲ. ನಾನು ಚನ್ನಬಸಪ್ಪ ವೀರಪ್ಪ ಗಿರಿಯಾಳ ಇವರಿಗೆ ದಿಃ 17-09-2014 ರಂದು ಖರೀದಿ ಪತ್ರ ಮಾಡಿಕೊಟ್ಟಿದ್ದರು ಕೂಡಾ ಲಾವಣಿ ಪತ್ರ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನಮ್ಮ ಗ್ರಾಮಸ್ಥರಾದ ರುದ್ರಗೌಡ ಗಿರಿಯಾಳ ಮತ್ತು ಭರಮಪ್ಪ ಇವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಾಕ್ಷಿಗಳ ಸಮಕ್ಷಮ ಪ್ರತಿವಾದಿಗೆ ಖರೀದಿ ಪತ್ರವನ್ನು ಬರೆದುಕೊಟ್ಟಿದ್ದರು ಬರೆದುಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಖರೀದಿ ಕೊಡುವ ಉದ್ದೇಶದಿಂದಲೇ ಹೊಸ ಶರತ್ ಗಳನ್ನು ತೆಗೆಸಿ ಹಳೆಯ ಶರತ್ ಗಳನ್ನು ಹಾಕಿಸಿ ಪತ್ರವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದರಲ್ಲಿ ಏನು ಬರೆಸಿಕೊಂಡಿದ್ದರು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಖರೀದಿ ಮಾಡಿದ ನಂತರ

ದಾವಾ ಸ್ವತ್ತನ್ನು ಸಮತಟ್ಟಾಗಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ
Sd/-xxx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.